ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಆಗಸ್ಟ್ 24, 2015

## ಶಾಸಕ ಎ. ವೆಂಕಟೇಶ್ ನಾಯಕ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಆಗಸ್ಟ್ 24**

ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಪೆನುಗೊಂಡ ಬಳಿಯ ಮಡಕಶಿರಾದಲ್ಲಿ ಸೋಮವಾರ ನಸುಕಿನಲ್ಲಿ ಸಂಭವಿಸಿದ ಬೆಂಗಳೂರು–ನಾಂದೇಡ್ ಎಕ್ಸ್‌ಪ್ರೆಸ್ ರೈಲು ಅಪಘಾತದಲ್ಲಿ ದೇವದುರ್ಗದ ಶಾಸಕ ಶ್ರೀ ಎ. ವೆಂಕಟೇಶ್ ನಾಯಕ್ ಅವರು ನಿಧನರಾಗಿರುವುದಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಅಂದಿನ ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ ನಂತಹ ತೃಣ ಮೂಲದ ರಾಜಕಾರಣದಲ್ಲಿ ಸಾರ್ವಜನಿಕ ಬದುಕನ್ನು ಪ್ರವೇಶಿಸಿದ ಶ್ರೀ ಅರಕೇರಾ ವೆಂಕಟೇಶ್ ನಾಯಕ್ ಅವರು 1991, 1998, 1999 ಹಾಗೂ 2004 ರಲ್ಲಿ ನಾಲ್ಕು ಬಾರಿ ರಾಯಚೂರು ಕ್ಷೇತ್ರದಿಂದ ಲೋಕ ಸಭೆಗೆ ಆಯ್ಕೆಯಾಗಿ ಸಂಸತ್ತು ಪ್ರವೇಶಿಸಿದ್ದು, ಅವರ ಜನಪ್ರಿಯತೆಗೆ ಸಾಕ್ಷಿಯಾಗಿತ್ತು. ಅಲ್ಲದೆ, 2013 ರಲ್ಲಿ ದೇವದುರ್ಗ ಕ್ಷೇತ್ರದಿಂದ ರಾಜ್ಯ ವಿಧಾನ ಸಭೆಗೂ ಪ್ರವೇಶಿಸಿ, ಆ ಭಾಗದಲ್ಲಿ ತಮ್ಮ ನಾಯಕತ್ವದಲ್ಲಿ ಪ್ರಭುತ್ವವನ್ನು ಕಾಯ್ದುಕೊಂಡಿದ್ದರು.

ಮಹದಾಯಿ ಜಲ ವಿವಾದ ಕುರಿತಂತೆ ಭಾನುವಾರ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸರ್ವ ಪಕ್ಷಗಳ ಸಭೆಗೆ ತಡವಾಗಿ ಆಗಮಿಸಿದ ಶ್ರೀ ವೆಂಕಟೇಶ್ ನಾಯಕ್ ಅವರು ಇಷ್ಟು ಬೇಗ ನಮ್ಮನ್ನಗಲಿ ತೆರಳುತ್ತಾರೆ ಎಂದು ಊಹಿಸಿರಲಿಲ್ಲ !

ಸದಾ ಕೆಲಸ ಮುಗಿದೊಡನೆ ಮನೆಗೆ ತೆರಳುವ ಪರಿಪಾಠ ಹೊಂದಿದ್ದ ಶ್ರೀ ವೆಂಕಟೇಶ್ ನಾಯಕ್ ಅವರು ತಮ್ಮ ಹುಟ್ಟೂರು ಅರಕೇರಾದಲ್ಲಿನ ಸ್ವ–ಗೃಹದಲ್ಲೇ ವಾಸಿಸುತ್ತಿದ್ದರು.

ಮೃದು ಮಾತಿಗೆ ಹೆಸರಾಗಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶದ ಅತ್ಯಂತ ಹಿರಿಯ ರಾಜಕಾರಣಿ ಎನಿಸಿದ್ದ ಅಜಾತ ಶತ್ರು ಶ್ರೀ ವೆಂಕಟೇಶ್ ನಾಯಕ್ ಅವರ ಹಠಾತ್ ನಿಧನವು ನನ್ನಲ್ಲಿ ಅತೀವ ನೋವನ್ನು ಉಂಟು ಮಾಡಿದೆ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಶ್ರೀ ವೆಂಕಟೇಶ್ ನಾಯಕ್ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಶ್ರೀ ವೆಂಕಟೇಶ್ ನಾಯಕ್ ಅವರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

**********

ಡಿ ಪಿ ಎಂ